
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 13 Reg. No. : KARBIL / 2005 / 16123 ಜುಲೈ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 7 ಪ್ರಕಟಣೆ : 30-07-2024


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ




ಶ್ರೀ ಬೆಳ್ಳೆ ರವೀಂದ್ರನಾಥ ರಾವ್ ಮತ್ತು ಶ್ರೀಮತಿ ಮಾಲಿನಿ ಬೆಳ್ಳೆ ಇವರ ಪುತ್ರ ಅಮೇರಿಕಾದಲ್ಲಿ ನೆಲೆಸಿರುವ ಶ್ರೀ ರಂಜನ್ ರಾವ್ ಬೆಳ್ಳೆ ಮತ್ತು ಶ್ರೀಮತಿ ಐವಿ ರಂಜನ್ ಬೆಳ್ಳೆ ಇವರು ತಮ್ಮ ಅಜ್ಜ ಮತ್ತು ಅಜ್ಜಿ ಶ್ರೀ ಬೆಳ್ಳೆ ವಿಠಲ್ ರಾವ್ ಮತ್ತು ಶ್ರೀಮತಿ ಪದ್ಮಾವತಿ ವಿಠಲ್ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲಚೇತನರ ವಸತಿ ನಿಲಯಕ್ಕೆ ರೂ. **3,00,000/-** (ರೂ. ಮೂರು ಲಕ್ಷ) ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ರೂ. **2** ಲಕ್ಷ ನೀಡಿದ್ದು, ಒಟ್ಟು ರೂ. **5** ಲಕ್ಷ ನೀಡಿ ಒಂದು ಕೋಣೆಯನ್ನು ಪ್ರಾಯೋಜಿಸಿದ್ದಾರೆ. ಮುಂದೆಯೂ ಇನ್ನು ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸುರತ್ಕಲ್ ಮಲ್ಲಮಾರು ದಿ। ಶ್ರೀನಿವಾಸ್ ಶಾನುಭೋಗ್ ಸ್ಮರಣಾರ್ಥ ಆವರ ಪುತ್ರ ಶ್ರೀ ವಾಸುದೇವ ಶಾನುಭೋಗ್ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲ ಚೇತನರ ವಸತಿ ನಿಲಯಕ್ಕೆ ರೂ. **1,00,000/-** (ರೂ. ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆಯೂ ಇನ್ನು ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶಾನುಭೋಗ್ ಕುಟುಂಬಸ್ಥರು, ಶ್ರೀ ಸುಬ್ರಹ್ಮಣ್ಯ ಸಭಾದ ಪದಾಧಿಕಾರಿಗಳು, ಯುವವೇದಿಕೆ ಮತ್ತು ಮಹಿಳಾ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.




(ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್)

## ಶ್ರೀ ಸುಬ್ರಹ್ಮಣ್ಯ ಸಭಾ ವಿದ್ಯಾನಿಧಿಗೆ ದೇಣಿಗೆ



ಮುಂಬೈ ನಿವಾಸಿ ಶ್ರೀ ಇನ್ನ ಜಗನ್ನಾಥ್ ರಾವ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಯಶೋದಾ ಜಗನ್ನಾಥ್ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿನಿಧಿಗೆ ರೂ. **1,00,000** (ರೂ. ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು. ಈ ಸಂದರ್ಭ ಅವರ ಮಗಳು ಶ್ರೀಮತಿ ಪೂರ್ಣಿಮಾ ಬದ್ರಿ, ಶ್ರೀ ಸಭಾ ನಿರ್ದೇಶಕ ಶ್ರೀ ಇನ್ನಾ ಚಂದ್ರಕಾಂತ್ ರಾವ್ ಉಪಸ್ಥಿತರಿದ್ದರು.

## 'ಶಿವಸದನ'




ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯದ ಹಿರಿಯ ನಾಗರಿಕರ ವಸತಿ ನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಪುತ್ತೂರಿನ ಆಸುಪಾಸಿನ ಮಕ್ಕಳ ದಾಖಲಾತಿ ತಾರೀಕು **1-6-2024**ರಿಂದ ಆರಂಭವಾಗಿದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ. ಮಿತ ದರದಲ್ಲಿ ಸುಸಜ್ಜಿತ ಶಾಲೆಯಲ್ಲಿ ಪರಿಣಿತರಿಂದ ಸೇವೆ, ಆರೈಕೆ, ಆಟ ಪಾಠವನ್ನು ಒದಗಿಸಲಾಗುವುದು. ಆವಶ್ಯಕತೆ ಇರುವವವರು ಮಾಹಿತಿ ಪಡೆಯಲು ವಿನಂತಿ. ನಿವಾಸಿ ಸೌಲಭ್ಯವೂ ಲಭ್ಯವಿದೆ.

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಕರುಣ್ ರಾವ್ ಬೆಳ್ಳೆ - 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ - 9844242442 ಶ್ರೀ ಪಿ. ಶ್ರೀಕಾಂತ್ ರಾವ್ - 7795116598

## ಶೃಂಗೇರಿ ಯಾತ್ರೆ



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಯಾತ್ರೆಯನ್ನು ಆಯೋಜಿಸಲಾಗಿದೆ. ತಾರೀಕು **01-09-2024**ನೇ ರವಿವಾರ ಬೆಳಗ್ಗೆ ಗಂಟೆ **6-30**ಕ್ಕೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು, ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

**ಪ್ರವಾಸದ ಶುಲ್ಕ :**
ಒಬ್ಬರಿಗೆ - ರೂ. 500/-
5ರಿಂದ 12 ವರ್ಷದೊಳಗಿನ ಮಕ್ಕಳಿಗೆ - ರೂ. 300/-

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**
ಶ್ರೀ ಅನಿಲ್ ಎನ್. ✆ : 9448815172
ಶ್ರೀಮತಿ ಕುಸುಮಾ ನವೀನ್ ಕುಮಾರ್ ✆ : 9480760904



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ತಾರೀಕು **19-8-2024**ನೇ ಸೋಮವಾರ ಬೆಳಗ್ಗೆ ಗಂಟೆ **6-00**ಕ್ಕೆ ಶ್ರೀ ಸಭಾದಲ್ಲಿ **ಋಗುಪಾಕರ್ಮ** ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696
ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618
ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ
ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.
ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್
ಪ್ರಕಾಶಕರು : ಹರ್ಷಕುಮಾರ್ ಕೇದಿಗೆ
: 7795116598 : 9343361618 e-mail : jnanashakthisss@gmail.com



## ಶುಭ ಹಾರೈಕೆ



ಶ್ರೀಮತಿ ಸುಕನ್ಯ

**ಶ್ರೀಮತಿ ಸುಕನ್ಯ** ಇವರು
ಪುತ್ತೂರು ತಾಲೂಕು ಯೋಜನಾಧಿಕಾರಿಯಾಗಿದ್ದು
ಇದೀಗ ಪದೋನ್ನತಿಗೊಂಡು
**ಕುಂದಾಪುರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿದ್ದಾರೆ.**
ತಮಗೆ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ
ಪರವಾಗಿ ಹಾರ್ದಿಕ ಶುಭ ಹಾರೈಕೆಗಳು.

**ಅಧ್ಯಕ್ಷರು ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ**
ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು


## ಶ್ರೀಮತಿ ವತ್ಸಲಾ ಕುಮಾರಿ ಇವರಿಗೆ ಪದೋನ್ನತಿ



ಶ್ರೀಮತಿ ವತ್ಸಲಾ ಕುಮಾರಿ

ಶ್ರೀಮತಿ ವತ್ಸಲಾ ಕುಮಾರಿ ಅವರು ಕರ್ನಾಟಕ ಸಚಿವಾಲಯದ ಹಣಕಾಸು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗೆ ಭಡ್ತಿ ಪಡೆದಿದ್ದಾರೆ. ಜಂಟಿ ಕಾರ್ಯದರ್ಶಿ ಹುದ್ದೆಯಿಂದ ಅಪರಕಾರ್ಯದರ್ಶಿ ಹುದ್ದೆಗೆ ಭಡ್ತಿ ಹೊಂದಿರುವ ಇವರು ಯು.ಜಿ. ಸುರೇಶ್ ರಾವ್ ಇವರ ಪತ್ನಿ ಮತ್ತು ದಿ। ಚಿತ್ರಾಪುರ ವೆಂಕಟ್ ರಾವ್ ಹಾಗೂ ದಿ। ಗುಲಾಬಿ ದಂಪತಿಯ ಪುತ್ರಿ ಮತ್ತು ದಿ। ಗೋಪಾಲ್ ರಾವ್ ಹಾಗೂ ದಿ। ಸರೋಜಾ ದಂಪತಿಯ ಸೊಸೆ.

***ನಮ್ಮ ಸ್ಥಾನಿಕ ಸಮುದಾಯಕ್ಕೆ ವಿಶೇಷ ಗೌರವವನ್ನು ತಂದುಕೊಟ್ಟ ಶ್ರೀಮತಿ ವತ್ಸಲಾ ಕುಮಾರಿಯವರಿಗೆ 'ಜ್ಞಾನಶಕ್ತಿ' ಬಳಗ ಶುಭವನ್ನು ಹಾರೈಸುತ್ತದೆ.***

## ಕು। ಪಲ್ಲವಿ ಕೆ. ಇವರಿಗೆ ಸನ್ಮಾನ



**ಕು। ಪಲ್ಲವಿ ಕೆ.** ಈ ಬಾರಿಯ ಸಿವಿಲ್ ಇಂಜಿನಿಯರಿಂಗ್ ವಿ. ಟಿ.ಯು ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ 5ನೇ ರ್‍ಯಾಂಕ್‌ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಕೇದಿಗೆ ಕಿಶೋರ್ ಕುಮಾರ್ ಮತ್ತು ಶ್ರೀಮತಿ ಚಂದ್ರಿಕಾ ಕೆ. ಇವರ ಸುಪುತ್ರಿ ಹಾಗೂ ಪುತ್ತೂರು ವಿವೇಕಾನಂದ ಕಾಲೇಜಿನ ವಿದ್ಯಾರ್ಥಿನಿ. ಇವಳನ್ನು ಶ್ರೀ ಸುಬ್ರಹ್ಮಣ್ಯ ಸಭಾದ **'ಆಟಿತೊ ಆಟ ಕೂಟ'** ಕಾರ್ಯಕ್ರಮದಲ್ಲಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

## 'ಡಾಕ್ಟರ್ಸ್ ಡೇ' ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರು ಮುರದಲ್ಲಿನ 'ಶಿವಸದನ'ದಲ್ಲಿ ಸಂಭ್ರಮಾಚರಣೆ



ಭಾರತದಲ್ಲಿ ಪ್ರತಿವರ್ಷ ಜುಲೈ ಒಂದರಂದು ವೈದ್ಯರಿಗೆ ವಿಶೇಷ ಗೌರವ ನೀಡುವ ಸಲುವಾಗಿ ವೈದ್ಯರ ದಿನವನ್ನು ಆಚರಿಸಲಾಗುತ್ತಿದೆ.

ವೈದ್ಯರು ನೂರಾರು ರೋಗಿಗಳಿಗೆ ಚಿಕಿತ್ಸೆ ನೀಡಬಹುದು. ಆದರೆ ಅವರಿಂದ ಚಿಕಿತ್ಸೆ ಪಡೆಯುವವರ ಪಾಲಿಗೆ ಆ ವೈದ್ಯ ದೇವಸ್ವರೂಪಿ. ಆ ಪ್ರಯುಕ್ತ 'ಶಿವಸದನ'ದ ಹಿರಿಯ ನಾಗರಿಕರಿಗಾಗಿ ಹಾಗೂ ವಿಶೇಷ ಚೇತನ ಮಕ್ಕಳಿಗಾಗಿ ಬೆಂಗಳೂರಿನ ಖ್ಯಾತ ಸರ್ಜನ್‌ರಾದ ಡಾಕ್ಟರ್ ಪಿ. ಯಸ್. ವೆಂಕಟೇಶ್ ರಾವ್ ಮತ್ತು ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ರಾವ್ ಇಂದಿನ ಉಪಾಹಾರ ಮತ್ತು ಸುಗ್ರಾಸ ಭೋಜನವನ್ನು ಪ್ರಾಯೋಜಿಸಿದ್ದಾರೆ.

ದೇವರು ಅವರಿಗೆ ಆಯುರಾರೋಗ್ಯ ಐಶ್ವರ್ಯ, ನೆಮ್ಮದಿ, ಶಕ್ತಿ ಕೊಟ್ಟು ಕಾಪಾಡಲಿ ಎಂದು ಶ್ರೀಸಭಾದ ಪ್ರಾರ್ಥನೆ. ಸರ್ವ ಡಾಕ್ಟರ್ಸ್‌ನವರ ಪರವಾಗಿ ಇಲ್ಲಿ ಬಂದು ಸದಾ ಹಿರಿಯರನ್ನು ಲವಲವಿಕೆಯಿಂದ ಇರಿಸುವ ಯುವ ಡಾಕ್ಟರ್ ಎಲ್ಲರ ಪ್ರೀತಿಯ ಡಾ। ಗಾನ ಇವರಿಗೆ ಹೂಗುಚ್ಛವನ್ನು ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ನೀಡಿ ಗೌರವಿಸಿದರು. ಅವರ ಭವಿಷ್ಯ ಉಜ್ವಲವಾಗಲಿ – ಒಳ್ಳೆಯ ಕೀರ್ತಿ ಗಳಿಸಲಿ. ಇನ್ನು ಮುಂದೆಯೂ ಇಲ್ಲಿನ ಹಿರಿಯರಿಗೆ ಸೇವೆ ಸಲ್ಲಿಸುವಂತಾಗಲಿ ಎಂದು ಹಾರೈಸಿದರು.

## ಬೆಳ್ಳಾಲ ಗೋಪಿನಾಥ ರಾವ್ Rtd. Army Officer ಇವರಿಗೆ ಸನ್ಮಾನ



ಬೆಳ್ಳಾಲ ಗೋಪಿನಾಥ್ ರಾವ್ ಭಾರತೀಯ ಸೇನೆಯಲ್ಲಿ ಸಿವಿಲ್ ಇಂಜಿನಿಯರ್ ಆಗಿ 25 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿರುತ್ತಾರೆ. ಕಾರ್ಗಿಲ್ ಕದನದಲ್ಲಿ ಭಾಗವಹಿಸಿದ್ದಾರೆ.

ರಾಮಕೃಷ್ಣ ಮಿಷನ್ ಜೊತೆ ಸಂಪೂರ್ಣ ಕೈಜೋಡಿಸಿಕೊಂಡು ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ಸ್ವಚ್ಛ ಮಂಗಳೂರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಲಿದ್ದು, ಸ್ವಚ್ಛ ಸೋಚ್‌ವಿಚಾರ ಸಂಕಿರಣದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿಯ 50 ಕಾಲೇಜುಗಳಲ್ಲಿ 15,000 ವಿದ್ಯಾರ್ಥಿಗಳಿಗೆ ಸಮಾಜ, ಪ್ರಕೃತಿ ಪರಿಸರದ ಸ್ವಚ್ಛತೆಯ ಬಗೆಗಿನ ಅರಿವು ಮೂಡಿಸುತ್ತಿರುವರು. ಉಡುಪಿ ಮತ್ತು ಮಂಗಳೂರು ತಾಲೂಕುಗಳ ಶಾಲಾ – ಕಾಲೇಜಿನ ವಿದ್ಯಾರ್ಥಿಗಳಿಗೆ ಭಾರತೀಯ ಸೇನೆಯ ಬಗ್ಗೆ ಮಾಹಿತಿ ಕಾರ್ಯಾಗಾರ ನಡೆಸುತ್ತ ಅವರಲ್ಲಿ ಸೈನ್ಯಕ್ಕೆ ಸೇರಿಕೊಳ್ಳಲು ಸ್ಫೂರ್ತಿ ನೀಡಿರುತ್ತಾರೆ. ನೈತಿಕತೆ ಮತ್ತು ಸಾಮಾಜಿಕದಾಯಿತ್ವಗಳಂತಹ ವಿಚಾರಗಳನ್ನು ಯುವ ಜನತೆಗೆ ಬೋಧಿಸುತ್ತಿರುವ ಇವರನ್ನು ದಿನಾಂಕ 26–7–2024ರಂದು ಮಂಗಳೂರು ನಾಟಿಕಲ್ಲಿನ ಕಣಚೂರು ಆಯುರ್ವೇದ ಆಸ್ಪತ್ರೆಯಲ್ಲಿ ಸನ್ಮಾನಿಸಲಾಯಿತು.

## *** ಅಪಾರಕೀರ್ತಿ ಗಳಿಸಿ ***



**ಕು। ಧನ್ಯಾ ರಾವ್** ಈ ಬಾರಿಯ ಸಿ.ಬಿ.ಎಸ್.ಸಿ. 10ನೇ ತರಗತಿಯ ಪರೀಕ್ಷೆಯಲ್ಲಿ ಶೇ 89 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೆಂಗಳೂರಿನ ಶ್ರೀ ಎಚ್. ವಿದ್ಯಾಧರ್ ರಾವ್ ಮತ್ತು ಶ್ರೀಮತಿ ರೂಪರಾಣಿ ಇವರ ಪುತ್ರಿ ಹಾಗೂ ಯಲಚೇನಹಳ್ಳಿ ಜ್ಯೋತಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ.

## ಶ್ರೀ ಸುಬ್ರಹ್ಮಣ್ಯ ಸಭಾ ವಿದ್ಯಾನಿಧಿಗೆ ದೇಣಿಗೆ



ಇತ್ತೀಚೆಗೆ ತಮ್ಮ ಮದುವೆಯ ಸುವರ್ಣ ಮಹೋತ್ಸವ ಆಚರಿಸಿದ ಪಲಿಮಾರಿನ ಪ್ರಸಿದ್ಧ ಜ್ಯೋತಿಷಿ ಶ್ರೀ ಕೆ. ವಿ. ರಾವ್ ಮತ್ತು ಶ್ರೀಮತಿ ವನಮಾಲ ದಂಪತಿಗಳು ತಮ್ಮ ಮಾತಾಪಿತರಾದ ಶ್ರೀ ಕಟ್ಟೆ ಕೃಷ್ಣಯ್ಯ ಮತ್ತು ಶ್ರೀಮತಿ ಪಾರ್ವತಿಅಮ್ಮ ಅವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ರೂ. 50,000/- ವಿದ್ಯಾರ್ಥಿವೇತನ ನಿಧಿಯನ್ನು ಸ್ಥಾಪಿಸಿರುವರು. ಪ್ರತೀವರ್ಷವೂ ದೇಣಿಗೆ ನೀಡಿ ಅದನ್ನು ಇನ್ನೂ ಹೆಚ್ಚಿಸುವ ಭರವಸೆ ನೀಡಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

ಶ್ರೀ ಸುಬ್ರಹ್ಮಣ್ಯ ಸಭಾದಿಂದ 2023–2024 ಅವಧಿಯಲ್ಲಿ 81 ವಿದ್ಯಾರ್ಥಿಗಳಿಗೆ ಒಟ್ಟು ರೂ. 1,11,44,000/- (ಒಂದು ಕೋಟಿ ಹನ್ನೊಂದು ಲಕ್ಷದ ನಲ್ವತ್ತನಾಲ್ಕು ಸಾವಿರ) ವಿದ್ಯಾರ್ಥಿವೇತನ ಮತ್ತು ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ. ಇದನ್ನು ಪಡೆದ ಹಲವು ವಿದ್ಯಾರ್ಥಿಗಳು, ಅವರ ಹೆತ್ತವರು, ಸಹೃದಯೀ ದಾನಿಗಳು ತಮ್ಮ ಹಿರಿಯರ ಸ್ಮರಣಾರ್ಥ ವಿದ್ಯಾರ್ಥಿನಿಧಿಗಳನ್ನು ಸ್ಥಾಪಿಸಿದ್ದಾರೆ. ನಾವು ಪ್ರತಿ ವರ್ಷ ನಿಗದಿತ ಮೊತ್ತವನ್ನು ಹೆಚ್ಚಿಸುತ್ತಿದ್ದು, ಇನ್ನಷ್ಟು ವಿದ್ಯಾರ್ಥಿನಿಧಿಗಳನ್ನು ದಾನಿಗಳು ಸ್ಥಾಪಿಸಲು ವಿನಂತಿಸುತ್ತೇವೆ. ಆದಾಯ ತೆರಿಗೆ ವಿನಾಯತಿ ಲಭ್ಯವಿರುತ್ತದೆ.

***ಹೆಚ್ಚಿನ ಮಾಹಿತಿ : ಶ್ರೀ ಕರುಣ್ ರಾವ್ ಬೆಳ್ಳೆ – 7337634359*** ಮತ್ತು
***ಶ್ರೀ ಪಿ. ಶ್ರೀಕಾಂತ್ ರಾವ್ –7795116598.***

*(ಚಿತ್ರ : ಶ್ರೀ ರಘುವೀರ್ ಪೆರ್ಡೂರ್)*



ಶ್ರೀ ಸುಬ್ರಹ್ಮಣ್ಯ ಸಭಾದಿಂದ ಪ್ರತೀ ವರ್ಷ ಆಯ್ದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಸಾಲ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು 2023–2024ನೇ ಸಾಲಿನಲ್ಲಿ ರೂ. 1,11,44,000/- (ರೂ. ಒಂದು ಕೋಟಿಯ ಹನ್ನೊಂದು ಲಕ್ಷದ ನಲ್ವತ್ತು ಸಾವಿರ) ನೀಡಲಾಗಿದೆ. ಮುಂದೆ ಈ ವಿದ್ಯಾರ್ಥಿಗಳು ತಾವು ಉದ್ಯೋಗ ಪಡೆದು ಶ್ರೀ ಸಭಾದಲ್ಲಿ ಇಂತಹ ವಿದ್ಯಾನಿಧಿಗಳನ್ನು ಸ್ಥಾಪಿಸಿ ಮುಂದಿನ ತಲೆಮಾರಿನ ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕೆಂದು ಶ್ರೀ ಸಭಾ ಆಶಿಸುತ್ತದೆ.

ಮೂಲ್ಕಿ ಕಾರ್ನಾಡು ನಿವಾಸಿ ಶ್ರೀ ರವಿಕುಮಾರ್ ಅವರು ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಶ್ರೀ ಸಭಾದ ವಿದ್ಯಾರ್ಥಿವೇತನವನ್ನು ಪಡೆದುಕೊಂಡಿದ್ದರು. ಈಗ ಮಕ್ಕಳು ಒಳ್ಳೆಯ ಉದ್ಯೋಗದಲ್ಲಿದ್ದು ಅವರನ್ನು ಪ್ರೇರೇಪಿಸಿ ಶ್ರೀ ಸಭೆಯ ವಿದ್ಯಾರ್ಥಿವೇತನ ನಿಧಿಗೆ ರೂ. 10,000/- ದೇಣಿಗೆ ನೀಡಿದ್ದಾರೆ. ಶ್ರೀ ಸಭಾ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕ ಶ್ರೀ ಸಂತೋಷ್ ಕುಮಾರ್ ಯು. ಈ ದೇಣಿಗೆಯನ್ನು ಪಡೆದರು.

*Prop. : P. Srikanth Rao* Mobile : 9343361618
**M/s. SAMARPAN**
***HOUSE OF STATIONERY***
"Vijaya Nivas", Opp. Pio Mall
Bejai Church Road, Mangalore - 4



## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**
**✆ : 9880968032 / 0824-2982095**

**ಶಾಖೆಗಳು**

ಮಂಗಳೂರು: ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**




Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building Opp. Busstand
Nr. Postoffice, Padubidri - 574 111 Belman
All Marriage & Other functions
Photography & Videography Available




ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
ಮತ್ತು **ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಪುತ್ತೂರಿನ 'ಶಿವಸದನ' ಹಿರಿಯನಾಗರಿಕರ ವಸತಿ ನಿಲಯಕ್ಕೆ ದೇಣಿಗೆ



ಪಲಿಮಾರಿನ ಪ್ರಸಿದ್ಧ ಜ್ಯೋತಿಷಿ ಶ್ರೀ ಕೆ. ವಿ. ರಾವ್ ಮತ್ತು ಶ್ರೀಮತಿ ವನಮಾಲ ರಾವ್ ಇವರ ವಿವಾಹ ಸ್ವರ್ಣಮಹೋತ್ಸವ ತಾ. 07–07–2024ನೇ ಆದಿತ್ಯವಾರ ಪಲಿಮಾರು 'ಶ್ರೀ ಮಹಾಲಿಂಗೇಶ್ವರ ದೇವಸ್ಥಾನ'ದಲ್ಲಿ ವಿಜೃಂಭಣೆಯಿಂದ ನಡೆಯಿತು.

ಈಶ್ವರ ದೇವರಿಗೆ ಶತರುದ್ರಾಭಿಷೇಕ ಸೇವೆ ನಡೆಸಿದ ಬಳಿಕ ಆಗಮಿಸಿದ ಬಂಧು ಬಾಂಧವರೊಂದಿಗೆ ತುಂಬಿ ತುಳುಕುತಿದ್ದ ಸಭಾಂಗಣದಲ್ಲಿ ಪ್ರಸಿದ್ಧ ಗೀತಾ ಸಾಹಿತ್ಯ ಕಲಾವಿದ ಕಲ್ಲಡ್ಕ ಶ್ರೀ ವಿಠಲ್ ನಾಯಕ್ ಇವರು ತಮ್ಮ ಕಾರ್ಯಕ್ರಮದಲ್ಲಿ ವಾಕ್ ವೈಖರಿಯ ಮೂಲಕ ಎಲ್ಲರನ್ನು ನಗೆಗಡಲಲ್ಲಿ ತೇಲಿಸಿ, ಉತ್ತಮ ಹಾಡುಗಾರಿಕೆಯಿಂದ ಎಲ್ಲರ ಮನಸ್ಸನ್ನು ಸಂತೋಷಪಡಿಸಿದರು. ಬಳಿಕ ವೈವಿಧ್ಯಮಯವಾದ ಭೋಜನದ ಆತಿಥ್ಯವನ್ನು ಸರ್ವರೂ ಸವಿದರು. ವರುಣದೇವರು ಸಹಾ ಈ ಸಮಯದಲ್ಲಿ ವಿರಮಿಸಿ, ಎಲ್ಲರಿಗೂ ಆ ಕಾರ್ಯಕ್ರಮಕ್ಕೆ ಬರಲು ಅನುಕೂಲ ಕಲ್ಪಿಸಿಕೊಟ್ಟದ್ದು ವಿಶೇಷ. ಶ್ರೀ ಕೆ. ವಿ. ರಾವ್ ಇವರು ಈ ಹಿಂದೆ ಸ್ವಯಂಪ್ರೇರಿತರಾಗಿ ನಮ್ಮನ್ನು ಅವರ ಮನೆಗೆ ಆಹ್ವಾನಿಸಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿ ನಿಲಯಕ್ಕೆ ರೂ. 1 ಲಕ್ಷ, ಉಡುಪಿಯಲ್ಲಿ ನಿರ್ಮಾಣಗೊಳ್ಳಲಿರುವ ಶೃಂಗೇರಿ ಶಾಖಾ ಮಠ ನಿವೇಶನಕ್ಕೆ ರೂ. 1 ಲಕ್ಷ ಹಾಗೂ ಪುರೋಹಿತರ ಸಂಘಕ್ಕೆ ರೂ. 50,000/– ನೀಡಿದ ಕೊಡುಗೈ ದಾನಿಯಾಗಿದ್ದಾರೆ. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಇವರು 'ದೇವರು ಈ ದಂಪತಿಗಳಿಗೆ ಆಯುರಾರೋಗ್ಯ, ಐಶ್ವರ್ಯ ನೆಮ್ಮದಿ ನೀಡಿ ಕಾಪಾಡಲಿ ಹಾಗೂ ಇನ್ನಷ್ಟು ಸಹಾಯ ನೀಡುವ ಶಕ್ತಿ ಭಗವಂತ ನೀಡುವಂತಾಗಲಿ' ಎಂದು ಹಾರೈಸಿದರು.

---



ಶ್ರೀಮತಿ ಜ್ಯೋತಿ ರವೀಂದ್ರ ಅತ್ತಾವರ ತನ್ನ ಪತಿ ಕೆ. ಜಿ. ರವೀಂದ್ರ ಅತ್ತಾವರ ಇವರ ಸ್ಮರಣಾರ್ಥ ರೂ. 10,000/–ವನ್ನು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯದ ಪ್ರತಿ ಕೊಠಡಿಯಲ್ಲಿ ಶ್ರಾವ್ಯ ಸಂಗೀತ ಅಳವಡಿಸುವ ವ್ಯವಸ್ಥೆಗೆ (Music Audio System) ದೇಣಿಗೆ ನೀಡಿರುತ್ತಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು ಈ ಸಂದರ್ಭ ಶ್ರೀ ಸಭಾ ಮಹಿಳಾ ವೇದಿಕೆ ಗೌರವ ಅಧ್ಯಕ್ಷೆ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಅರುಣಾ ಸೋಮಶೇಖರ್ ಉಪಸ್ಥಿತರಿದ್ದರು.



ಮುಂಬೈ ನಿವಾಸಿ ಶ್ರೀ ಇನ್ನ ಜಗನ್ನಾಥ್ ರಾವ್ ಮತ್ತು ಶ್ರೀಮತಿ ಯಶೋದ ಜಗನ್ನಾಥ್ ರಾವ್ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲಚೇತನರ ವಸತಿ ನಿಲಯಕ್ಕೆ ರೂ. 1,00,000/– (ರೂ. ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆಯೂ ಇನ್ನು ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕ ಶ್ರೀ ಇನ್ನ ಚಂದ್ರಕಾಂತ್ ರಾವ್ ದೇಣಿಗೆ ಸ್ವೀಕರಿಸಿದರು.

---



ಕಾರ್ಕಳ ನಿವಾಸಿ ಶುಂಠಿಪಾಡಿ ಶ್ರೀ ವಾಸುದೇವ ರಾಯರ ಮಗ ಶ್ರೀ ಮನೋಹರ್ ರಾವ್ ಇವರ ಧರ್ಮಪತ್ನಿ ಶ್ರೀಮತಿ ಸಾವಿತ್ರಿ ಮನೋಹರ್ ರಾವ್ ತಮ್ಮ 75ನೇ ಹುಟ್ಟುಹಬ್ಬದ ಸಂಭ್ರಮದ ಸವಿನೆನಪಿಗಾಗಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲ ಚೇತನರ ವಸತಿ ನಿಲಯಕ್ಕೆ ರೂ. 25,000/– ದೇಣಿಗೆ ನೀಡಿದ್ದಾರೆ. ಮುಂದೆಯೂ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು ಈ ಸಂದರ್ಭ ಶ್ರೀ ಸಭಾ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ನಿರ್ದೇಶಕ ಶ್ರೀ ಸಂತೋಷ್ ಕುಮಾರ್ ಯು., ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಕೋಶಾಧಿಕಾರಿ ಶ್ರೀಮತಿ ಭುವನಾ ನಾಗರಾಜ್ ಉಪಸ್ಥಿತರಿದ್ದರು.

---

ಹೆಜಮಾಡಿಯ **ಶ್ರೀ ವೆಂಕಪ್ಪಯ್ಯ ಕೃಷ್ಣ ರಾವ್** ಇವರ ಸ್ಮರಣಾರ್ಥ ಅವರ ಧರ್ಮಪತ್ನಿ **ಶ್ರೀಮತಿ ವಿಜಯ ವಿ. ಕೆ. ರಾವ್** ತಮ್ಮ ಮಗ ಮತ್ತು ಸೊಸೆ ಜತೆಗೂಡಿ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರು ಮುರದಲ್ಲಿರುವ 'ಶಿವಸದನ' ಹಿರಿಯ ನಾಗರಿಕರ ಹಾಗೂ ವಿಕಲಚೇತನರ ವಸತಿ ನಿಲಯಕ್ಕೆ ರೂ. 1,00,000/– (ರೂ. ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆಯೂ ಇನ್ನು ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

PREETHIKA AUTOMOBILES

Wholesale & Retail Dealers in :

2 & 3 WHEELERS, SPARES & ACCESSORIES


KARANGALPADY, MANGALORE - 575 003

Dealers in :

Minda Switches, M. K. Products, Swiss Auto Products, Power Coils

2493633
9845851573

## *** ಅಪಾರಕೀರ್ತಿ ಗಳಿಸಿ ***



**ಡಾ| ಮಧುರಾ ರಾವ್** ಅವರು ತಮ್ಮ ಸ್ನಾತಕೋತ್ತರ ಪದವಿಗಾಗಿ ಒಪ್ಪಿಸಿದ ಮಹಾಪ್ರಬಂಧವನ್ನು 2022ನೇ ಸಾಲಿನಲ್ಲಿ ಅತ್ಯುತ್ತಮ ಪ್ರಬಂಧವೆಂದು 'ಇಂಡಿಯನ್ ಆರ್ಥೋಡಾಂಟಿಕ್ ಸೊಸೈಟಿ' ಆಯ್ಕೆ ಮಾಡಿದೆ.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ, ಸುಳ್ಯ



**ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ, ಸುಳ್ಯ ಇದರ ಮಹಾಸಭೆ, ವಿದ್ಯಾರ್ಥಿವೇತನ ವಿತರಣೆ ಮತ್ತು ಆಟಿ ತಿಂಡಿ ಮೇಳ ಕಾರ್ಯಕ್ರಮವು ದಿನಾಂಕ 21–07–2024ನೇ ಆದಿತ್ಯವಾರ ಅಪರಾಹ್ನ ಗಂಟೆ 2–30ಕ್ಕೆ 'ಶ್ರೀ ದ್ವಾರಕ ಹೋಟೆಲ್ ಸಭಾಭವನ'ದಲ್ಲಿ ನಡೆಯಿತು.**

ಸಂಘದ ಅಧ್ಯಕ್ಷರಾದ ಶ್ರೀ ಕುಮಾರಸ್ವಾಮಿ ಅನುಪಸ್ಥಿತಿಯಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಕೃಷ್ಣ ರಾವ್ ನಾವೂರು ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಸತೀಶ್ ರಾವ್ ದಾಸರಬೈಲ್, ಖಜಾಂಜಿ ಶ್ರೀ ಅರುಣಕುಮಾರ್ ಎನ್. ಉಪಾಧ್ಯಕ್ಷರಾದ ಶ್ರೀ ರಾಮಕೃಷ್ಣ ರಾವ್ ಪೆರ್ವಾಜೆ, ಮುಖ್ಯ ಅತಿಥಿಗಳಾಗಿ ಶ್ರೀ ಚಂದ್ರಶೇಖರ್ ರಾವ್ ನಿಧಿಮುಂಡ ಕಾವು, ಮಹಿಳಾ ಸಮಿತಿ ಅಧ್ಯಕ್ಷರಾದ ಶ್ರೀಮತಿ ಡಾ. ವೀಣಾ ಉಪಸ್ಥಿತರಿದ್ದರು. ಸಭೆಯಲ್ಲಿ ಸಂಘದ ಪದಾಧಿಕಾರಿಗಳು, ನಿಕಟಪೂರ್ವ ಅಧ್ಯಕ್ಷರುಗಳು, ಸಮಾಜ ಬಾಂಧವರು ಭಾಗವಹಿಸಿದ್ದರು.

ಶ್ರೀಮತಿ ರಾಜೇಶ್ವರಿ ಕುಮಾರಸ್ವಾಮಿ ರೆಂಜಾಳ ಇವರು ದೀಪಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಗುರು ಪೂರ್ಣಿಮೆಯ ವಿಶೇಷ ಪ್ರಾರ್ಥನೆಯನ್ನು ಶ್ರೀ ಅರುಣ ಕುಮಾರ್ ಎನ್. ನಡೆಸಿಕೊಟ್ಟರು. ಶ್ರೀ ಕೃಪಾಶಂಕರ್ ತುದಿಯಡ್ಕ ಆಗಮಿಸಿದ ಎಲ್ಲಾ ಸಮಾಜ ಬಾಂಧವರಿಗೆ ಸ್ವಾಗತವನ್ನು ಕೋರಿದರು. ಸಂಘದ ವರದಿಯನ್ನು ಸಂಘದ ಕಾರ್ಯದರ್ಶಿ ಶ್ರೀ ಸತೀಶ್ ರಾವ್ ದಾಸರಬೈಲ್ ನೀಡಿದರು. ಲೆಕ್ಕಪತ್ರಗಳನ್ನು ಶ್ರೀ ಅರುಣ್‌ಕುಮಾರ್ ಎನ್. ಇವರು ಮಂಡಿಸಿದರು. ಸಮಾಜದ ಸುಮಾರು 19 ವಿದ್ಯಾರ್ಥಿಗಳಿಗೆ ರೂಪಾಯಿ 89,500/– ವಿದ್ಯಾರ್ಥಿವೇತನ ವಿತರಿಸಲಾಯಿತು. ಎಸ್.ಎಸ್.ಎಲ್.ಸಿ.ಯಲ್ಲಿ ಶೇಕಡಾ 99.04% ರಾಜ್ಯಕ್ಕೆ ಏಳನೇ ಸ್ಥಾನ ಪಡೆದ ಶ್ರೀ ಆಯುಷ್ ರಾವ್ ನಾವೂರು ಮತ್ತು ಮಧ್ಯಪ್ರದೇಶದ ಇಂದೋರ್ ಐ.ಐ.ಟಿ.ಯಲ್ಲಿ M. Sc. Bio-Tecnologyಗೆ ಪ್ರವೇಶಾತಿ ಪಡೆದ ಶ್ರೀ ವಿಷ್ಣು ಪ್ರಕಾಶ್ ತುದಿಯಡ್ಕ ಪ್ರತಿಭಾ ಪುರಸ್ಕಾರ ನೀಡಿಗೌರವಿಸಲಾಯಿತು. ಹಾಗೆಯೇ ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ವಿಷಯದಲ್ಲಿ ಶೇಕಡಾ 100 ಅಂಕ ಪಡೆದ ಶ್ರೀ ಆಯುಷ್ ರಾವ್ ಇವರಿಗೆ ಶ್ರೀ ಬಿ. ಅಚ್ಯುತ ರಾವ್ ಬೆಂಗಳೂರು ಇವರು ನೀಡಿದ ಪ್ರೋತ್ಸಾಹಧನವನ್ನು ನೀಡಿ ಗೌರವಿಸಲಾಯಿತು. ವಿದ್ಯಾನಿಧಿ ಮತ್ತು ವಿದ್ಯಾರ್ಥಿ ವೇತನ ದಾನಿಗಳನ್ನು ಅಭಿನಂದಿಸಲಾಯಿತು ಮತ್ತು ಸಂಘದ ಕಾರ್ಯಕ್ರಮಗಳಿಗೆ ಸ್ಥಳಾವಕಾಶ ನೀಡಿರುವಂತಹ ಶ್ರೀ ಹರಪ್ರಸಾದ್ ತುದಿಯಡ್ಕ, ಡಾ. ಸದಾಶಿವ ರಾವ್ ಮತ್ತು ಶ್ರೀ ವಸಂತ ರಾವ್ ಮತ್ತು ಮನೆಯವರು, ದ್ವಾರಕ ಇವರನ್ನು ಅಭಿನಂದಿಸಲಾಯಿತು. ಡಾಕ್ಟರ್ ವೀಣಾರವರು ಸಂಘದ ಚಟುವಟಿಕೆ, ಪ್ರಗತಿ ಬಗ್ಗೆ ಮಾಹಿತಿ ನೀಡಿದರೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಕೃಷ್ಣ ರಾವ್ ನಾವೂರು ಕಾಂತಮಂಗಿಲದಲ್ಲಿ ಪ್ರತಿ ಮಂಗಳವಾರ ನಡೆಯುವ ಸಂಧ್ಯಾವಂದನೆ, ನಿತ್ಯಪೂಜೆ, ರುದ್ರಪಠಣ ತರಗತಿಯಲ್ಲಿ ಹೆಚ್ಚು ಸಮಾಜ ಬಾಂಧವರು ಭಾಗವಹಿಸಬೇಕು, ಶೃಂಗೇರಿ ಗುರುದರ್ಶನ ಕಾರ್ಯಕ್ರಮದಲ್ಲಿ ಎಲ್ಲಾ ಮನೆಯವರು ಭಾಗವಹಿಸಬೇಕು, ಸಂಘದ ಸದಸ್ಯತನ ಪಡೆಯುವಂತೆ ಮನವಿ ಮಾಡಿದರು. ಆಟಿ ತಿಂಡಿ ಮೇಳದ ಯಶಸ್ಸಿಗೆ ಕಾರಣರಾದ ಪ್ರತಿಯೊಬ್ಬ ಮಾತೆಯರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾ ಬೇರಿಕೆಯವರು ನೆರವೇರಿಸಿದರು. ಶ್ರೀ ಫಾಲಚಂದ್ರ ಇವರು ಸಹಕರಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದನಾರ್ಪಣೆಯನ್ನು ಶ್ರೀ ಗಿರಿಜಾಶಂಕರ ತುದಿಯಡ್ಕ ಇವರು ಸಲ್ಲಿಸಿದರು.

ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಉಡುಪಿ ಒಳಕಾಡು ದಿ| ಮಿಲಿಟರಿ ನಾರಾಯಣ ರಾಯರ ಸೊಸೆ ದಿ| ದಿನೇಶ್ ರಾಯರ ಪತ್ನಿ **ಶ್ರೀಮತಿ ಉಷಾ** (60 ವ) ತಾ. 21–7–2024ನೇ ರವಿವಾರ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

***



**ಶ್ರೀ ಕೋಲ್ಪೆ ಹರೀಶ್ ರಾವ್** (70) ತಾ. 15–7–2024ನೇ ಸೋಮವಾರ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



ದಿ| ಟಿ. ಶಿವಶಂಕರ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಶ್ಯಾಮಲಾ ರಾವ್** (77) ತಾ. 25–6–2024ನೇ ಮಂಗಳವಾರ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

***



**ಶ್ರೀ ನಂದಳಿಕೆ ದೇವ ರಾವ್** (74) ತಾ. 6–7–2024ನೇ ಶನಿವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಮೂಲ್ಕಿ ಸದಾಶಿವ ರಾವ್** ತಾ. 12–7–2024ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



ದಿ| ಬೆಳ್ಳೆ ವಸಂತ ಶರ್ಮ ಇವರ ಧರ್ಮಪತ್ನಿ **ಶ್ರೀಮತಿ ಭುವನೇಶ್ವರಿ** (74) ತಾ. 26–6–2024ನೇ ಬುಧವಾರ ನಿಧನ ಹೊಂದಿದರು. ಇವರು ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಶ್ರೀ ಉಮೇಶ್ ರಾವ್ ಪೊಳಲಿ** (76) ತಾ. 10–7–2024ನೇ ಬುಧವಾರ ಪೊಳಲಿಯಲ್ಲಿ ನಿಧನ ಹೊಂದಿದರು. ಅವರು ಪತ್ನಿಯನ್ನು ಅಗಲಿದ್ದಾರೆ.

***



**ಶ್ರೀ ಸತೀಶ್ ರಾವ್** (67) ತಾ. 12–7–2024ನೇ ಶುಕ್ರವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

***



**ಸಂಸ್ಕೃತ ಪ್ರಾಧ್ಯಾಪಕ, ವಿದ್ವಾಂಸ ಶ್ರೀ ಎಂ. ರಘುರಾಮ ಶರ್ಮ, ಕಂಕನಾಡಿ** (87) ಇವರು ತಾ. 3–7–2024ನೇ ಬುಧವಾರ ನಿಧನರಾದರು. ಇವರು ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ ಸುದೀರ್ಘ 35 ವರ್ಷ ಸೇವೆ ಸಲ್ಲಿಸಿದ್ದರು. ಇವರು ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು ಮತ್ತು ಬಂಧು–ಬಾಂಧವರನ್ನು ಹಾಗೂ ಶಿಷ್ಯವೃಂದವನ್ನು ಅಗಲಿದ್ದಾರೆ.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



NAVADURGA FINANCIALS
Estd 1998
SCAN ME TO KNOW MORE!!!

# ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ – ಮಹಾಸಭೆ ಮತ್ತು ವಾರ್ಷಿಕೋತ್ಸವ

ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರೆ ಇದರ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕೋತ್ಸವವು ದಿನಾಂಕ 16–6–2024ರಂದು ಉದಯಾದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ವಿಜೃಂಭಣೆಯಿಂದ ಜರುಗಿತು.

**ಮಹಾಸಭೆ :** 2023 – 2024ನೇ ಸಾಲಿನ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎಮ್. ಕೆ. ಮೋಹನ್ ರಾವ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಿಕೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಬಿ. ವಾಸುದೇವ ರಾವ್, ಉಪಾಧ್ಯಕ್ಷರಾದ ಶ್ರೀಮತಿ ಲಲಿತಾಂಬಾ ಯೋಗಾನಂದ ಶಾಸ್ತ್ರಿ, ಶ್ರೀಮತಿ ಸುಮಿತ್ರ ಸುಬ್ಬರಾವ್, ಶ್ರೀ ಲಕ್ಷ್ಮೀಕಾಂತ್ ರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ರಾವ್, ಕೋಶಾಧಿಕಾರಿ ಶ್ರೀ ಅರವಿಂದ್ ರಾವ್, ಯುವ ವೇದಿಕೆ ಅಧ್ಯಕ್ಷ ಶ್ರೀ ಜನಾರ್ದನ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀಕಾಂತ್ ರಾವ್ ಉಪಸ್ಥಿತರಿದ್ದರು. ಶ್ರೀಮತಿ ಸುಪ್ರೀತಾ ರವಿ ರಾವ್ ಪ್ರಾರ್ಥಿಸಿ ಶ್ರೀ ಕೃಷ್ಣರಾಜ ರಾವ್ ಸ್ವಾಗತಿಸಿ ಶ್ರೀಮತಿ ರಮ್ಯಾ ಅರುಣ್ ಕುಮಾರ್ ವರದಿವಾಚಿಸಿ ಶ್ರೀ ಅರವಿಂದ ರಾವ್ ಲೆಕ್ಕಪತ್ರ ಮಂಡನೆಯೊಂದಿಗೆ ಶ್ರೀ ನಯನಾಭಿರಾಮಸ್ವಾಮಿ ವಂದಿಸಿ ಶ್ರೀ ಅರುಣ್ ಕುಮಾರ್ ಮುಂಡ್ಕೂರು ಕಾರ್ಯಕ್ರಮ ನಿರೂಪಿಸಿದರು. ಸದಸ್ಯರ ಚಪ್ಪಾಳೆಯ ಅನುಮೋದನೆ ಮೂಲಕ ಸಭೆ ಸಂಪನ್ನಗೊಂಡಿತು.

**ಸಾಂಸ್ಕೃತಿಕ ಕಾರ್ಯಕ್ರಮ :** ಸಂಘದ ಸದಸ್ಯರು, ಮಹಿಳಾ ವೇದಿಕೆ ಸದಸ್ಯರು, ಯುವ ವೇದಿಕೆ ಸದಸ್ಯರಿಂದ ಒಂದು ಗಂಟೆಯ ಕಾಲ ಸಭಿಕರು ಮೆಚ್ಚುವಂತಹ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಾಯಿತು. ಶ್ರೀಮತಿ ಧರ್ಮಪ್ರಭಾ ವಿ. ರಾವ್ ಕಾರ್ಯಕ್ರಮ ನಿರೂಪಿಸಿದರು.

**ವಾರ್ಷಿಕೋತ್ಸವ :** ಸಂಘದ 14ನೇ ವರ್ಷದ ವಾರ್ಷಿಕೋತ್ಸವ ಅರ್ಥಪೂರ್ಣವಾಗಿ ನಡೆಯಿತು ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಯುವಪೀಳಿಗೆ ಹೆಚ್ಚು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ತಿಳಿಸಿದರು. ಬ್ರಹ್ಮಾವರ ಸಂಘದ ಕಾರ್ಯದರ್ಶಿ ಶ್ರೀಮತಿ ಸವಿತಾ ಎರ್ಮಾಳ್ 'ಸಂಘ ಯಾಕೆ ಬೇಕು' ಎಂಬುದರ ಬಗ್ಗೆ ದಿಕ್ಸೂಚಿ ಭಾಷಣ ನೀಡಿದರು. ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಶ್ರೀ ಮಂಜುನಾಥ ಹೆಬ್ಬಾರ್ ಶುಭಾಶಂಸನೆ ನುಡಿದರು. ಮಂಗಳೂರು ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರಾದ ಶ್ರೀಮತಿ ಸುಮಂಗಲಾ ಪ್ರಭಾಕರ್ ರಾವ್ ಮುಖ್ಯ ಅತಿಥಿ ನೆಲೆಯಲ್ಲಿ ಶುಭ ಹಾರೈಸಿದರು. ಸಾಧಕ ಸನ್ಮಾನದಲ್ಲಿ ಕೃಷಿಯಲ್ಲಿ ಮಾನ್ಯ ರಾಷ್ಟ್ರಪತಿಗಳಿಂದ ಪ್ರಶಸ್ತಿ ಪುರಸ್ಕೃತರಾದ ಶ್ರೀ ಬಿ. ಕೆ. ದೇವರಾವ್ ಇವರಿಗೆ 'ಕೃಷಿ ಸನ್ಮಾನ ಪತ್ರ' ನೀಡಿ, ಶ್ರೀಮತಿ ಶ್ರೇಯ ಜಯಪ್ರಕಾಶ್ ರಾವ್ ಬೆಂಗಳೂರು ಇವರಿಗೆ 'ಕಲಾ ಸನ್ಮಾನ ಪತ್ರ' ನೀಡಿ, ಶುಭಾಂಜನ ಬೆಳುವಾಯಿ ಇವರಿಗೆ 'ಬಹುಮುಖ ಪ್ರತಿಭೆ ಸನ್ಮಾನಪತ್ರ' ನೀಡಿ ಪುರಸ್ಕರಿಸಲಾಯಿತು. ಇದರೊಂದಿಗೆ ಲಕ್ಷ್ಮೀ–ಗೋಪಾಲಕೃಷ್ಣ ಮೆಮೋರಿಯಲ್ ಟ್ರಸ್ಟ್ 'ನಂದಗೋಕುಲ' ವತಿಯಿಂದ ಈ ಮೂವರು ಸಾಧಕರಿಗೆ ಗೌರವ ಸನ್ಮಾನ ನೀಡಿ ಪುರಸ್ಕರಿಸಿದರು. ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿಯಲ್ಲಿ ಶೇಕಡಾ 90ಕ್ಕಿಂತ ಅಧಿಕ ಅಂಕಗಳಿಸಿದ ಮಾ. ಸತ್ಯಸ್ವರೂಪ್ ಹೆಜಮಾಡಿ, ಧನ್ಯಶ್ರೀ ಪಾದಬೆಟ್ಟು, ಮಾ। ಮೋಹಿತ್ ಎಲ್ಲೂರು ಈ ಮೂರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪಿಯುಸಿ, ಡಿಗ್ರಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲಾಯಿತು. ಸುರತ್ಕಲ್‌ನಲ್ಲಿ ನಡೆದ 'ಶ್ರೀ ಸುಬ್ರಹ್ಮಣ್ಯ ಟ್ರೋಫಿ' ಕ್ರಿಕೆಟ್ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಪಡೆದ ಪಡುಬಿದ್ರೆ ಕ್ರಿಕೆಟ್ ತಂಡದ ಸದಸ್ಯರನ್ನು ಗೌರವಿಸಿ ಅಭಿನಂದಿಸಲಾಯಿತು. ಶ್ರೀಮತಿ ಸುಪ್ರೀತಾ ರವಿ ರಾವ್ ಪ್ರಾರ್ಥಿಸಿ, ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಸ್ವಾಗತಿಸಿ, ಶ್ರೀ ಎಂ. ಕೆ. ದಿವಾಕರ್ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀಮತಿ ಸುಮಂಗಲ ನಯನಾಭಿರಾಮ ಸ್ವಾಮಿ, ಶ್ರೀಮತಿ ಪವಿತ್ರ ಕೃಷ್ಣ ರಾವ್, ಶ್ರೀಮತಿ ಮಂಜುಶ್ರೀ ಅನಂತರಾಮ್ ರಾವ್ ಸನ್ಮಾನ ಪತ್ರ ಓದಿದರು. ಶ್ರೀ ಅರವಿಂದ್ ರಾವ್ ಸಹಾಯಧನ ಪಟ್ಟಿ ವಾಚಿಸಿದರು. ಶ್ರೀ ಕೃಷ್ಣರಾಜ ಮದರಂಗಡಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್, ಶ್ರೀಮತಿ ಸುಮಿತ್ರ ಸುಬ್ಬ ರಾವ್ ಅತಿಥಿ ಅಭ್ಯಾಗತರನ್ನು ಗೌರವಿಸಿದರು. ಶ್ರೀ ಪಿ. ಬಿ. ವಾಸುದೇವ ರಾವ್ ಹಾಗೂ ಶ್ರೀ ಎಸ್. ಜನಾರ್ದನ್ ರಾವ್ ಕೂಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ರಮ್ಯಾ ಅರುಣ್ ರಾವ್ ವಂದಿಸಿ ಶ್ರೀ ಅರುಣ್ ಕುಮಾರ್ ಹಾಗೂ ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕರೆಲ್ಲರೂ ಸಹಕರಿಸಿದರು. ಸುರತ್ಕಲ್, ಕಾರ್ಕಳ, ಮೂಡಬಿದ್ರೆ, ಉಡುಪಿ, ಮಂಗಳೂರು ಹಾಗೂ ಮಹಾಮಂಡಲದ ಸಂಘದ ಅಧ್ಯಕ್ಷರು ಪದಾಧಿಕಾರಿಗಳು ಭಾಗವಹಿಸಿ ಕಾರ್ಯಕ್ರಮ ಚಂದಗಾಣಿಸಿದರು.



ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ ಕೂಟ'

ಆಟಿಯ ವಿಶೇಷ ಖಾದ್ಯಗಳನ್ನು ಒಳಗೊಂಡ ಭೋಜನದ ಬಳಿಕ ಕೆ.ಎಂ.ಸಿ. ಅತ್ತಾವರದ ಹಿರಿಯ ವೈದ್ಯಾಧಿಕಾರಿ ಡಾ. ಸೋನಲ್ ಭಟ್ ಮತ್ತು ತಂಡದವರು ತುರ್ತು ಸಂದರ್ಭದಲ್ಲಿ ಜೀವರಕ್ಷಣೆ ಎಂಬ ಉಪನ್ಯಾಸವನ್ನು ಪ್ರಾತ್ಯಕ್ಷಿಕೆ ಮೂಲಕ ನೀಡಿದರು. ಡಾ. ಸೋನಲ್ ಭಟ್ ಇವರನ್ನು ಶ್ರೀ ಸಭಾ ವತಿಯಿಂದ ಗೌರವಿಸಲಾಯಿತು. ಬಳಿಕ ಮಹಿಳಾ ವೇದಿಕೆಯ ವತಿಯಿಂದ 'ಹಳ್ಳಿ ಉಡುಗೆ' ಸ್ಪರ್ಧೆ ನಡೆಯಿತು. ಶ್ರೀ ಬಿ. ಗೋಪಿನಾಥ್ ರಾವ್ ತೀರ್ಪುಗಾರರಾಗಿ ಸಹಕರಿಸಿದರು. 25ಕ್ಕೂ ಹೆಚ್ಚು ಗಾಯಕರು 'ಕರೋಕೆ ರಸಮಂಜರಿ'ಯಲ್ಲಿ ಹಾಡಿದರು. ಝೀ ಕನ್ನಡ ಸರಿಗಮಪ ದ್ವಿತೀಯ ರನ್ನರ್ಸ್ ಅಪ್ ಕು। ತನುಶ್ರೀ ಅತಿಥಿಯಾಗಿ ಭಾಗವಹಿಸಿ ತನ್ನ ಅದ್ಭುತ ಗಾಯನ ಮೂಲಕ ಹಾಡುಗಳನ್ನು ಹಾಡಿ ರಂಜಿಸಿದಳು. ಕಾರ್ಯಕ್ರಮದ ಫೋಟೊ ಹಾಗೂ ವೀಡಿಯೋಗಳನ್ನು ಶ್ರೀ ಸಭಾ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಒದಗಿಸಿದರು. ಬಹುಮಾನಗಳನ್ನು ಶ್ರೀಮತಿ ಸ್ನೇಹಲತಾ ದಿವಾಕರ್ ಪ್ರಾಯೋಜಿಸಿದರು. ಶ್ರೀ ಸಭಾದ ಉಪಾಧ್ಯಕ್ಷರುಗಳಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಡಾ. ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಜೊತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ. ಎಸ್. ವ್ಯವಸ್ಥೆಗಳಲ್ಲಿ ಸಹಕರಿಸಿದರೆ ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಕಾರ್ಯದರ್ಶಿ ಶ್ರೀ ಸಾಯಿಪ್ರಸಾದ್, ಮಹಿಳಾ ವೇದಿಕೆ ಗೌರವ ಅಧ್ಯಕ್ಷೆ ಶ್ರೀಮತಿ ಕನಕವಲ್ಲಿ ಕೇದಿಗೆ, ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಸ್ಪರ್ಧೆಗಳನ್ನು ಆಯೋಜಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕೆ. ಧನ್ಯವಾದ ನೀಡಿದರು.

*ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು*








## ಶ್ರೀ ಸುಬ್ರಹ್ಮಣ್ಯ ಸಭಾದ 'ಆಟಿತೊ ಆಟ ಕೂಟ' ಕಾರ್ಯಕ್ರಮದ ಸ್ಪರ್ಧಾ ವಿಜೇತರು :

**ಚೆನ್ನೆಮಣೆ** : I: ಸಿ. ಮಹಾಲಕ್ಷ್ಮೀ ರಾವ್, II : ವೀಣಾ ಸತ್ಯಶಂಕರ, III : ಶ್ರುತಿ. **ಕಲ್ಲಾಟ** : I : ವೀಣಾ ಸತ್ಯಶಂಕರ, II : ಸುಜಾತಾ ಬೆಳ್ಳೆ, III : ಶ್ಯಾಮಲಾ ಶಶಿಕಾಂತ್ **ಹಳ್ಳಿ ಉಡುಗೆ** : I : ಸ್ನೇಹಲತಾ ದಿವಾಕರ್, II : ಕನಕವಲ್ಲಿ ಹರ್ಷಕುಮಾರ್, III : ಶ್ರೀಧರ್ ರಾವ್ **ಚೆಸ್** : I : ಸಿ. ಬಿ. ರಾವ್, II : ಅಭಿನವ್, III : ದೇವಾಂಶ್, **ಕೇರಂ ಜೂನಿಯರ್** : I : ಅನ್ವಿತ್ ಎಸ್. ರಾವ್ ಮತ್ತು ಶ್ರೀಯಾ, II : ಪ್ರತೀಕ್ ಮತ್ತು ಪೃಥ್ವಿ – **ಸೀನಿಯರ್** I : ಅನಿಲ್ ಬಿ. ಎಸ್. ಮತ್ತು ಪ್ರಮೋದ್ ಕೇದಿಗೆ, II : ಸಿ. ಬಿ. ರಾವ್ ಮತ್ತು ಗಣೇಶ್ ರಾವ್. **ಬಹುಮಾನಗಳ ಪ್ರಾಯೋಜಕರು : ಶ್ರೀಮತಿ ಸ್ನೇಹಲತಾ ದಿವಾಕರ್.**

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ




ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241


**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Muralidhara Rao Adyapadi
Proprietor
Mob : 94480 27259
99803 16434
**SPANDANA**
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ ಕೂಟ'



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಯುವವೇದಿಕೆ ಮತ್ತು ಮಹಿಳಾ ವೇದಿಕೆಯ ಜಂಟಿ ಸಹಯೋಗದಲ್ಲಿ ತಾರೀಕು 21–7–2024ನೇ ರವಿವಾರ **'ಆಟಿತೋ ಆಟ ಕೂಟ'** ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಚೆನ್ನೆಮಣೆ, ಕಲ್ಲಾಟ, ಕೇರಂ, ಚೆಸ್ ಪಂದ್ಯಾಟವನ್ನು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಪ್ರೀತಿ ಭಟ್ – ಚೆಸ್; ಶ್ರೀ ಜಯಚಂದ್ರ ಬಿ.ವಿ. – ಕೇರಂ; ಶ್ರೀ ಐ.ಪಿ. ನಾಗರಾಜ್ ರಾವ್ – ಕಲ್ಲಾಟ; ಶ್ರೀಮತಿ ಶ್ರೀಲತಾ ಭಟ್ – ಚೆನ್ನೆಮಣೆ ಪಂದ್ಯಾಟವನ್ನು ನಡೆಸಿಕೊಟ್ಟರು. (7ನೇ ಪುಟಕ್ಕೆ ಮುಂದುವರಿಯುವುದು)




Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*